# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ:-123 ವಿಜಯನಗರ ಬೆಂಗಳೂರು.40**

ಸಂ:ಸ.ಅ/ವಾರ್ಡ್ ಸಮಿತಿ/ /ಸಭೆ- /20-21 ದಿ:20.02.2021

## ವಿಜಯನಗರ ವಾರ್ಡ್ ಸಂಖ್ಯೆ:-123 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ವಿಷಯ:- ಮಾನ್ಯ ಆಯುಕ್ತರು ಬಿಬಿಎಂಪಿ ರವರು ಆದೇಶ ಸಂಖ್ಯೆ:ಟಿ12(5) ಪಿ.ಆರ್/35/2020-21 ದಿ:05.12.2020 ರವರ ಆದೇಶದಂತೆ ದಿ:20.02.2021 ರಂದು ವಾರ್ಡ್ ಸಂಖ್ಯೆ:123 ರ ವಿಜಯನಗರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಪದನಾಮ |
|---|---|---|
| 1. | ಶ್ರೀ. ಡಿ.ಕೆ ಬಾಬು | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ. |
| 2. | ಶ್ರೀಮತಿ. ಸಂಗೀತ ಆರ್ | ಸದಸ್ಯ ಕಾರ್ಯದರ್ಶಿ ವಾರ್ಡ್ ಸಂಖ್ಯೆ: 123. |
| 3. | ಶ್ರೀ. ಆದಿನಾರಾಯಣ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4. | ಶ್ರೀ. ದೊಡ್ಡವೀರಪ್ಪ | ಸಹಾಯಕ ಅಭಿಯಂತರರು BWSSB |
| 5. | ಶ್ರೀ. ಮಂಜು ಎಂ.ವಿ | Marshal |
| 6. | ಶ್ರೀ. ಚಂದ್ರ ಶೇಖರ್ | ಕಂದಾಯ ಅಧಿಕಾರಿಗಳು. |
| 7. | ಶ್ರೀ.ಗಿರೀಶ್ | ತೆರಿಗೆ ನಿರೀಕ್ಷಕರು |
| 8. | ಶ್ರೀ. ಕುಮಾರ | ಕಂದಾಯ ಅಧಿಕಾರಿಗಳು. |

ದಿನಾಂಕ: 20.02.2021 ರಂದು, ಸಮಯ 12.00 ಗಂಟೆಗೆ, ಸಭೆಯು ಪ್ರಾರಂಭವಾಯಿತು ಸಭೆಯಲ್ಲಿ ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀ.ಡಿ.ಕೆ ಬಾಬು ನೋಡಲ್ ಅಧಿಕಾರಿ ರವರು ಹಾಗೂ ಸಮಿತಿ ಸದಸ್ಯರು ಹಾಜರಾಗಿರುತ್ತಾರೆ.

ಶ್ರೀ.ಡಿ.ಕೆ.ಬಾಬು ರವರ ಅಧ್ಯಕ್ಷತೆಯಲ್ಲಿ ವಾರ್ಡಿನ ಕಾರ್ಯದರ್ಶಿಗಳಾದ ಶ್ರೀಮತಿ. ಸಂಗೀತ ಆರ್ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಮತ್ತು ಸಿಬ್ಬಂದಿ ವರ್ಗದವರನ್ನೂ ಸ್ವಾಗತಿಸಿದರು.

1. ಮುಂದಿನ ಸಭೆಯಲ್ಲಿ AEE MOH, SWD, SWM, ARO, AEE (Civil) ರವರು ಹಾಜರಿರುವಂತೆ ನೋಡಲ್ ಅಧಿಕಾರಿ ರವರು ಕಾರ್ಯದರ್ಶಿಗೆ ಸೂಚಿಸಿದರು.
2. Horticulture, SWD, BWSSB, BESCOM, Welfare Department, Traffic Police ಹಾಗೂ ಕಾನೂನು ಪೋಲೀಸ್ ಮುಂದಿನ ಸಭೆಯಲ್ಲಿ ಹಾಜರಿರುವಂತೆ ನೋಡಲ್ ಅಧಿಕಾರಿ ರವರು ಕಾರ್ಯದರ್ಶಿಗೆ ಸೂಚಿಸಿದರು.
3. GT Mall ಕಂದಾಯ ವಸೂಲಾತಿ ಬಗ್ಗೆ ಚರ್ಚಿಸಲಾಗಿ ಕಂದಾಯ ಅಧಿಕಾರಿಗಳು ಒಂದು ಕೋಟಿ ಒಂಬತ್ತು ಲಕ್ಷಗಳು ಕಂದಾಯ ಪಾವತಿ ಆಗಿರುವುದಾಗಿ ಕಾರ್ಯದರ್ಶಿಗಳಗೆ ತಿಳಿಸಿದರು.
4. Pot hole ಕಾಮಗಾರಿಯನ್ನು ಪೈಪ್ ಲೈನ್ 1ನೇ ಕ್ರಾಸ್ ನಿಂದ 10ನೇ ಕ್ರಾಸ್ ರ ವರೆಗೆ, 3ನೇ ಮುಖ್ಯರಸ್ತೆ, 4ನೇ ಮುಖ್ಯರಸ್ತೆಯಲ್ಲಿ ನಿರ್ವಹಿಸಲು ನೋಡಲ್ ಅಧಿಕಾರಿ ರವರು ಸೂಚಿಸಿದರು.
5. ಅರಣ್ಯ ಇಲಾಖೆಗೆ ಈಗಾಗಲೇ ದೂರು ಸಲ್ಲಿಸಿದ್ದರು ಸಹ ಕ್ರಮ ವಹಿಸದ ಕಾರಣ ಮತ್ತೊಮ್ಮೆ ಲಿಖಿತ ರೂಪದಲ್ಲಿ ದೂರನ್ನು ದಾಖಲಿಸಲು ನೋಡಲ್ ಅಧಿಕಾರಿ ರವರು ಕಾರ್ಯದರ್ಶಿಗೆ ಸೂಚಿಸಿದರು.
6. ಮುಂದಿನ ವಾರದಲ್ಲಿ Debris ವಿಲೇವಾರಿ ಮಾಡಲು ಪರಿಸರ ಇಲಾಖೆ ಸಿಬ್ಬಂಧಿಯೊಂದಿಗೆ Gang work ನಿಯೋಜಿಸುವಂತೆ ನೋಡಲ್ ಅಧಿಕಾರಿಗಳು ಕಾರ್ಯದರ್ಶಿಗೆ ಸೂಚಿಸಿದರು.

7. Mask ಕಡ್ಡಾಯವಾಗಿ ಧರಿಸಬೇಕೆಂದು ಹಾಗೂ Shopping Mall, Party Hall ಮತ್ತು ಸಾರ್ವಜನಿಕರು ಹೆಚ್ಚು ಸೇರುವಂತಹ ಜಾಗದಲ್ಲಿ ತಿಳುವಳಿಕೆ ಕೊಡಬೇಕೆಂದು ಹಾಗೂ ಕೇಂದ್ರ ಕಛೇರಿಯ ಆದೇಶವನ್ನು ಪಾಲಿಸುವಂತೆ ನೋಡಲ್ ಅಧಿಕಾರಿ ರವರು Marshal ಗೆ ಸೂಚಿಸಿದರು.
8. ವಾರ್ಡ್‌ನಲ್ಲಿ ಬೀದಿ ದೀಪಗಳನ್ನು Repair ಮಾಡಲು ಸಂಬಂದಪಟ್ಟ ಅಧಿಕಾರಿ ರವರಿಗೆ ಪತ್ರ ಬರೆಯಲು ನೋಡಲ್ ಅಧಿಕಾರಿ ರವರು ಸೂಚಿಸಿದರು.
9. ನೋಡಲ್ ಅಧಿಕಾರಿಗಳು ತಪಾಸಣೆ ನಡೆಸುವಾಗ ಇಂದಿರ ಕ್ಯಾಂಟಿನ್ ಪಕ್ಕ ಇರುವ ಉದ್ಯಾನವನದಲ್ಲಿ ಗೊಬ್ಬರ್ ತಯಾರಿಕೆಗಾಗಿ Compost Pit ನಿರ್ಮಾಣ ಮಾಡಿದ್ದು, ಇದೇ ರೀತಿಯಲ್ಲಿ ಉಳಿದ ಪಾರ್ಕ್‌ಗಳಲ್ಲಿ Compost Pit ನಿರ್ಮಾಣ ಮಾಡಲು ನೋಡಲ್ ಅಧಿಕಾರಿ ರವರು ತೋಟಗಾರಿಕೆ ಇಲಾಖೆ ರವರಿಗೆ ಸೂಚಿಸಿದರು.
10. ನೋಡಲ್ ಅಧಿಕಾರಿ ರವರು ಬೆಳ್ಳಿಗೆ ಅನಿರೀಕ್ಷಿತವಾಗಿ ವಾರ್ಡ್ ಪರಿವೀಕ್ಷಣೆ ನಡೆಸಿದಾಗ ತ್ಯಾಜ್ಯ ವಿಲೇವಾರಿ ಮಾಡುವ 8 Auto Tipper ಗಳ ಚಾಲಕರು ಇಲ್ಲದ ಕಾರಣ Idle ಆಗಿರುವುದರಿಂದ ಸಂಬಂಧಪಟ್ಟ ಗುತ್ತಿಗೆದಾರರಿಗೆ ದೂರವಾಣಿ ಮುಖೇನ ತಿಳಿಸಿರುವುದಾಗಿ ಸಭೆಯ ಗಮನಕ್ಕೆ ತಂದರು.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು. ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

RSangali

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 123 ವಿಜಯನಗರ.

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು.